**ಕರ್ನಾಟಕ ಸರ್ಕಾರ**
**(ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ)**

ಸಂಖ್ಯೆ:ಬಿಟಿಇ/05/ಇಎಫ್/2020

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001,
ದೂರವಾಣಿ ಸಂಖ್ಯೆ:080-2220777
email.dte.commissioner@gmail.com
ದಿನಾಂಕ:02.11.2020.

**ಸು ತ್ತೋ ಲೆ**

**ವಿಷಯ:** ಪರೀಕ್ಷಾ ಫಲಿತಾಂಶ ಹಿಂದಕ್ಕೊಪ್ಪಿಸುವ ಅರ್ಜಿಗಳ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂ:ಇಡಿ/258/ಟಿಪಿಇ/12, ಬೆಂಗಳೂರು, ದಿ:6-11-1997.

2 ಸರ್ಕಾರಿ ಆದೇಶ ಸಂ:ಇಡಿ/258/ಟಿಪಿಇ/98, ಬೆಂಗಳೂರು, ದಿ:11-8-2000

3 ಸರ್ಕಾರಿ ಆದೇಶಸಂ;ಎಫ್‌ಡಿ/11/ಟಿಪಿಇ/2007,ಬೆಂಗಳೂರು,ದಿ:03-12-2007.

*****

ತಾಂತ್ರಿಕ ಪರೀಕ್ಷಾ ಮಂಡಳಿಯ ವಿವಿಧ ಡಿಪ್ಲೊಮಾ ಕೋರ್ಸುಗಳ **ಸೆಪ್ಟೆಂಬರ್ 2020 ರ** ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶವನ್ನು ಹಿಂದಕ್ಕೊಪ್ಪಿಸಲು ಇಚ್ಛಿಸುವ ಅಭ್ಯರ್ಥಿಗಳ ಬಗ್ಗೆ ಪ್ರಿನ್ಸಿಪಾಲರುಗಳು ಅಭ್ಯರ್ಥಿಗಳ ಅಂಕಪಟ್ಟಿಗಳು ಬರುವವರೆಗೆ ಕಾಯದೆ ಫಲಿತಾಂಶದ ಜೊತೆಗೆ ಆನ್‌ಲೈನ್‌ನಲ್ಲಿ (BTE Linx) ಕಳುಹಿಸಿರುವ ಮಾರ್ಕ್ಸ್ ರಿಜಿಸ್ಟರ್‌ನಲ್ಲಿ ಸೂಚಿಸಿರುವ ಅಂಕಗಳ ಆಧಾರದ ಮೇಲೆ ಫಲಿತಾಂಶ ಪ್ರಕಟವಾದ ***01 ತಿಂಗಳೊಳಗಾಗಿ ದಿನಾಂಕ:30-11-2020 ರೊಳಗೆ*** ಫಲಿತಾಂಶ ಹಿಂದಕ್ಕೊಪ್ಪಿಸುವ ಅರ್ಜಿಗಳನ್ನು ಅಪೇಕ್ಷಿತ ಅಭ್ಯರ್ಥಿಗಳಿಂದ ಪಡೆದು ಕ್ರೋಢೀಕರಿಸಿ ತಾಂತ್ರಿಕ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಯವರಿಗೆ **ದಿನಾಂಕ:07-12-2020 *ರೊಳಗೆ*** ಕಳುಹಿಸಿಕೊಡಲು ಸೂಚಿಸಲಾಗಿದೆ. ಅಂಕಪಟ್ಟಿಗಳು ಬರಲಿಲ್ಲವೆಂಬ ಕಾರಣದಿಂದ ನಿಗಧಿತ ಸಮಯದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಇದಲ್ಲದೆ ಉಲ್ಲೇಖ(2)ರ ಸರ್ಕಾರದ ಆದೇಶದ ಪ್ರಕಾರ ಪರೀಕ್ಷಾ ಫಲಿತಾಂಶ ಹಿಂದಕ್ಕೊಪ್ಪಿಸುವ **ಶುಲ್ಕ ರೂ.500-00** ಗಳನ್ನು ಅಭ್ಯರ್ಥಿ ಅರ್ಜಿ ಸಲ್ಲಿಸಿದ ದಿನಾಂಕದಿಂದ **03** ದಿನಗಳೊಳಗೆ ಸರ್ಕಾರಕ್ಕೆ ಜಮಾ ಮಾಡಲು ತಿಳಿಸಲಾಗಿದೆ. ಇದಕ್ಕೆ ತಪ್ಪಿದಲ್ಲಿ ಸಂಸ್ಥೆಯವರು ಉಲ್ಲೇಖಿಸಿದ ಸರ್ಕಾರಿ ಆದೇಶದ ಪ್ರಕಾರ ಪ್ರತಿದಿನ ತಡವಾಗಿ ಜಮಾ ಮಾಡಿದುದಕ್ಕೆ ದಂಡ ಶುಲ್ಕವೆಂದು ದಿನವೊಂದಕ್ಕೆ **ರೂ.1000-00** ಗಳಂತೆ ಪಾವತಿ ಮಾಡಬೇಕಾಗಿರುತ್ತದೆ ಎಂದು ತಿಳಿಸಲಾಗಿದೆ.

02/11/2020

**ಪ್ರ.ಕಾರ್ಯದರ್ಶಿ,**
**ತಾಂತ್ರಿಕ ಪರೀಕ್ಷಾ ಮಂಡಳಿ,**
**ಬೆಂಗಳೂರು.**

**ಇವರಿಗೆ,**

ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಮತ್ತು ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರ ಗಮನಕ್ಕೆ ಮತ್ತು ಮುಂದಿನ ಸೂಕ್ತ ಕ್ರಮಕ್ಕೆ ಕಳುಹಿಸಲಾಗಿದೆ.

ಪ್ರತಿ:

1. ಆಯುಕ್ತರ ಆಪ್ತಶಾಖೆ – ಅವಗಾಹನೆಗಾಗಿ.
2. ನಿರ್ದೇಶಕರ ಆಪ್ತಶಾಖೆ – ಅವಗಾಹನೆಗಾಗಿ.
3. ಇ-ಗೌರ್ನೆನ್ಸ್ – ಸುತ್ತೋಲೆ ಪ್ರಕಟಿಸಲು ಸಲುವಾಗಿ.
4. ಇಸಿಎಸ್ ವಿಭಾಗ – ಮುಂದಿನ ಕ್ರಮಕ್ಕಾಗಿ.
5. ಸಾರ್ವಜನಿಕ ಸಂಪರ್ಕಾಧಿಕಾರಿ, ಕಾ & ತಾಂ.ಶಿ.ಇ. ಬೆಂಗಳೂರು.
6. ರಿಜಿಸ್ಟ್ರಾರ್ (ಪರೀಕ್ಷೆ).
7. ಕಾರ್ಯದರ್ಶಿಗಳ ಆಪ್ತಶಾಖೆ.